# [1]Conversion of Agricultural Land for Non-agricultural Purposes Under Section 95 of the Karnataka Land Revenue Act, 1964 Procedure to be followed

## CIRCULAR

**Subject.**—Conversion of Agricultural Land for Non-Agricultural purposes under Section 95 of Karnataka Land Revenue Act, 1964 — Procedure to be followed.

The following guidelines are issued to simplify and maintain uniformity in granting permission to use agricultural land for non-agricultural purposes. These guidelines will have to be scrupulously followed by revenue authorities while disposing applications under Section 95 of the Karnataka Land Revenue Act.

1. The process of Granting/Rejecting conversion shall be completed within 45 days of the receipt of the application. If the concerned sanctioning authorities do not adhere to the time schedule, they will be liable to disciplinary action.
2. The application seeking conversion of land shall be received in duplicate by the Tahsildar's office in the form prescribed at Annexure-1 to the circular. The Tahsildar shall forward a copy of the application to the sanctioning authority immediately. A weekly statement of number of applications received by the Tahsildar shall be sent to the sanctioning authority.
3. If any additional information is required the applicant shall be intimated within one week of receipt of the application.
4. The sanctioning authorities shall maintain a single register for all applications of conversion of land as prescribed in Annexure-2.
5. It is clarified that the revenue authorities are only dealing with conversion of agricultural land for non-agricultural purpose. But mere conversion does not entitle the occupant to utilise the land for the non-agricultural purpose without obtaining sanction/permission from concerned Competent Authority like urban development authority, local bodies like (CMC, TMC, Gram Panchayat, and also Pollution Control Board. These bodies will, subsequent to the conversion order, give necessary sanctions after following due process

1. Published in the Karnataka Gazette, Extraordinary, dated 8-6-1999, *vide* Notification No. RD 7 LGP 95, dated 7-6-1999

of Law with necessary safeguards. Therefore obtaining clearances prior to sanction of conversion order is not required.

6. Deputy Commissioners and the Assistant Commissioners should only look into the provisions of the Karnataka Land Revenue Act and other allied laws like the Land Reforms Act, PTCL Act, Land Grant Rules, Land Acquisition Act, *etc.*

7. As soon as the application is received by the Tahsildar, the same shall be verified by the Tahsildar. He shall verify the following:

   (i) Only the occupant of the land has filed the application.

   (ii) The conversion will not defeat any of the following laws, in particular:

      (a) Sections 48-A, 77 and 77-A of Karnataka Land Reforms Act, 1961;

      (b) Rule 9 of Land Grant Rules;

      (c) Section 4(1) and 4(2) and prohibition of PTCL Act;

      (d) Rule 102-B of Land Revenue Rules relating to Green Belt.

   (iii) The land has not been notified for acquisition under Sections 4 and 6 of Land Acquisition Act.

8. The burden of verification regarding the above laws lies solely on the Tahsildar and the applicant shall not be asked to produce any documents for the same.

9. The Tahsildar shall forward the application along with his report to the Deputy Commissioner/Assistant Commissioner within 15 days of the receipt of the application. The report should contain a revenue sketch of the area to be converted.

10. The Deputy Commissioner/Assistant Commissioner shall inspect the land to satisfy themselves that the diversion is not likely to cause public nuisance and does not violate the existing provisions of law administered by this department. In areas where the C.D.P./O.D.P. has been published under the K.T.C.P. Act the Deputy Commissioner shall not refuse permission of conversion of such land if it is for the same purpose as specified in the C.D.P./O.D.P.

11. If conversion is to be granted then the applicant has to be issued a notice to pay the conversion fine within 15 days of the notice as per the proforma at Annexure-3.

12. The applicant has to pay the required amount either through the challan/D.D. and give an undertaking as per the proforma at Annexure-4.

13. After payment the Deputy Commissioner/Assistant Commissioner shall issue the conversion order as per the proforma enclosed at Annexure-5.

**Note:** The conditions enumerated in Annexures 4 and 5 are not exhaustive and the sanctioning authorities may impose additional conditions to ensure compliance with any law, regulation applicable to the particular areas.





14. The rejection order shall be speaking order containing specific reasons for rejection and should not have vague reasons like, it will cause public nuisance or there is objection from public *etc.*

---

ಅನುಬಂಧ 1

ರೂ. 10.00 ಗಳ ಸ್ಟ್ಯಾಂಪ್
ಅಂಟಿಸಬೇಕು

(ಕರ್ನಾಟಕ ಭೂಕಂದಾಯ 1964ರ ನಿಯಮ 95(2)ರಡಿಯಲ್ಲಿ ಭೂ ಪರಿವರ್ತನೆಗೆ ಸಲ್ಲಿಸಬೇಕಾದ ಅರ್ಜಿ)

(ದ್ವಿಪ್ರತಿಗಳಲ್ಲಿ ಸಲ್ಲಿಸಬೇಕು)

ಗೆ,
ತಹಶೀಲ್ದಾರ್
. . . . . . . . . .ತಾಲ್ಲೂಕು

(1) ಅರ್ಜಿದಾರರ ಹೆಸರು ಮತ್ತು ವಾಸಸ್ಥಳ ಅಂಚೆ ವಿಳಾಸ

(2) ಭೂ ಪರಿವರ್ತನೆ ಕೋರಿರುವ ಜಮೀನಿನ ವಿವರ : ತಾಲ್ಲೂಕು ಗ್ರಾಮ ಸ.ನಂ. ಒಟ್ಟು ವಿಸ್ತೀರ್ಣ ಪರಿವರ್ತನೆ ಕೋರಿರುವ ಜಮೀನಿನ ವಿಸ್ತೀರ್ಣ

(3) ಭೂ ಪರಿವರ್ತನೆ ಯಾವ ಉದ್ದೇಶಕ್ಕಾಗಿ :

   (ಅ) ವಾಸದ ಉದ್ದೇಶಕ್ಕಾಗಿಯೇ? :

   (ಆ) ವಸತಿಯೇತರ ಉದ್ದೇಶಕ್ಕಾಗಿಯೇ? :

      (1) ಕೈಗಾರಿಕಾ ಉದ್ದೇಶಕ್ಕಾಗಿಯೇ? :

      (2) ವಾಣಿಜ್ಯ ಉದ್ದೇಶಕ್ಕಾಗಿಯೇ? :

(4) ಅರ್ಜಿದಾರರು ಈ ಭೂಮಿಯ ಖಾತೆ ದಾರರು ಎನ್ನುವ ಬಗ್ಗೆ ಹಕ್ಕುದಾಖಲೆಗಳ :

   (1) ಆರ್.ಟಿ.ಸಿ. (ಚಾಲ್ತಿ ವರ್ಷ) :

   (2) ಮ್ಯುಟೇಶನ್ ಆದೇಶ ಇವುಗಳ ದೃಢೀಕೃತ ಪ್ರತಿಗಳನ್ನು ಲಗತ್ತಿಸುವುದು :

(5) ಜಮೀನಿನ ಒಟ್ಟು ವಿಸ್ತೀರ್ಣವನ್ನು ಪರಿವರ್ತನೆಗಾಗಿ ಕೋರದೆ ಇದ್ದಲ್ಲಿ.

ಪರಿವರ್ತನೆಗೆ ಕೋರಿರುವ ಭಾಗದ ಕಚ್ಚಾ ನಕಾಶೆ.

(6) ಈ ಹಿಂದೆ ಇದೇ ಸ.ನಂ. ಬಗ್ಗೆ ಭೂ ಪರಿವರ್ತನೆಗಾಗಿ ಅರ್ಜಿ ಸಲ್ಲಿಸಿ ವಜಾ ಆಗಿದ್ದಲ್ಲಿ ಯಾವ ಕಾರಣಕ್ಕಾಗಿ ವಜಾ ಆಗಿರುತ್ತೆ? ಆದೇಶದ ಸಂಖ್ಯೆ ಹಾಗೂ ದಿನಾಂಕ ನಮೂದಿಸುವುದು.

ನಾನು ಮೇಲ್ಕಂಡಂತೆ ಸಲ್ಲಿಸಿರುವ ವಿವರಗಳು ಹಾಗೂ ದಾಖಲೆಗಳು ಸತ್ಯವಾಗಿರುತ್ತದೆ. ಹಾಗೂ ಭೂ ಪರಿವರ್ತನೆಗೆ ನಿಯಮಾನುಸಾರ ವಿಧಿಸುವ ಶುಲ್ಕಗಳನ್ನು ಪಾವತಿಸಲು ಬದ್ಧನಾಗಿದ್ದೇನೆ.

ಅರ್ಜಿದಾರರ ಸಹಿ

ಸ್ಥಳ:

ದಿನಾಂಕ:

---

ಅನುಬಂಧ 2

**ಕರ್ನಾಟಕ ಭೂ ಕಂದಾಯ ನಿಯಮ 95(2)ರಡಿ ಭೂ ಪರಿವರ್ತನೆ ಕೋರಿರುವ ಅರ್ಜಿಗಳ ವಹಿ.**

| ಕ್ರಮ ಸಂಖ್ಯೆ | ಅರ್ಜಿದಾರರ ಹೆಸರು ಮತ್ತು ವಿಳಾಸ | ಅರ್ಜಿ ಸಲ್ಲಿಸಿದ ದಿನಾಂಕ | ಗ್ರಾಮ/ಸರ್ವೆ ನಂ./ವಿಸ್ತೀರ್ಣ | ಉದ್ದೇಶ | ತಹಶೀಲ್ದಾರರ ಕಛೇರಿಯಲ್ಲಿ ಅರ್ಜಿ ಸಲ್ಲಿಸಿದ ದಿನಾಂಕ |
|---|---|---|---|---|---|
| (1) | (2) | (3) | (4) | (5) | (6) |
| | | | | | |

| ತಹಶೀಲ್ದಾರ್ ರವರಿಂದ ವರದಿ ಬಂದ ದಿನಾಂಕ | ಭೂ ಪರಿವರ್ತನೆ ಮತ್ತು ಕರಾರು ಪತ್ರ ಹಾಜರು ಪಡಿಸಲು ತಿಳುವಳಿಕೆ ನೀಡಿದ ದಿನಾಂಕ | ಹಣ ಪಾವತಿಸಿದ ಚಲನ್/ಡಿ.ಡಿ. ನಂ. ದಿನಾಂಕ ಹಾಗೂ ಮೊಬಲಗು | ಖರಾಬ್ "ಎ" ಇದ್ದಲ್ಲಿ ಪಾವತಿಸಿದ ಶುಲ್ಕ | ಭೂ ಪರಿವರ್ತನೆ ಆದೇಶ ನೀಡಿದ ದಿನಾಂಕ | ಷರಾ ಭೂ ಪರಿವರ್ತನೆ ಅರ್ಜಿ ತಿರಸ್ಕರಿಸಿದ್ದಲ್ಲಿ ತಿಳುವಳಿಕೆ ನೀಡಿದ ದಿನಾಂಕ |
|---|---|---|---|---|---|
| (7) | (8) | (9) | (10) | (11) | (12) |
| | | | | | |

ಜಿಲ್ಲಾಧಿಕಾರಿ/ಉಪ ವಿಭಾಗಾಧಿಕಾರಿಗಳ
ಕಾರ್ಯಾಲಯ
ದಿನಾಂಕ:

---

ಅನುಬಂಧ 3

ತಿಳುವಳಿಕೆ

ವಿಷಯ: . . . . . . . . ಜಿಲ್ಲೆ. . . . . . . . . . . ತಾಲ್ಲೂಕು
. . . . . . . .ಹೋಬಳಿ . . . . . . . . . . . ಗ್ರಾಮದ ಸರ್ವೆ
ನಂಬರ್. . . . . . . . ರಲ್ಲಿ. . . . . . . . . ವಿಸ್ತೀರ್ಣವನ್ನು
ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ/
ಮಂಜೂರು ಮಾಡುವ ಬಗ್ಗೆ.





ನೀವು ದಿನಾಂಕ. . . . . . . . . . . .ರಂದು ಭೂ ಪರಿವರ್ತನೆಗೆ . . . . . . . . . . . . . . .ಗ್ರಾಮದ . . . . . . . . . . .ಸ.ನಂ. ರಲ್ಲಿ. . . . . . . . . . . .ವಿಸ್ತೀರ್ಣವನ್ನು . . . . . . . . . . . . . .ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಿರುತ್ತದೆ. ಹಾಗು ಈ ಬಾಬ್ತು ಈ ಕೆಳಗೆ ನಮೂದಿಸಿರುವ ಭೂ ಪರಿವರ್ತನಾ ಶುಲ್ಕವನ್ನು ಮತ್ತು ಪೋಡಿ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿ. ಈ ತಿಳುವಳಿಕೆ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ರೂ.100.00 (ರೂಪಾಯಿಗಳು ಒಂದು ನೂರು ಮಾತ್ರ) ಛಾಪಾ ಕಾಗದದಲ್ಲಿ ಕರಾರು ಪತ್ರದೊಂದಿಗೆ ಚಲನ್/ಡಿ.ಡಿ.ಯನ್ನು 15 ದಿವಸಗಳೊಳಗಾಗಿ ಹಾಜರ್ ಪಡಿಸಿ ಭೂ ಪರಿವರ್ತನಾ ಮಂಜೂರಾತಿ ಆದೇಶವನ್ನು ಪಡೆಯತಕ್ಕದ್ದು.

ನಿಗದಿ ಪಡಿಸಿದ ಅವಧಿಯಲ್ಲಿ ಭೂ ಪರಿವರ್ತನೆ ಶುಲ್ಕ ಪಾವತಿಸಿದ ಬಗ್ಗೆ ಚಲನ್/ಡಿ.ಡಿ. ಮತ್ತು ಕರಾರು ಪತ್ರವನ್ನು ಹಾಜರ್ ಪಡಿಸದಿದ್ದಲ್ಲಿ ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗುವುದು.

| ಸರ್ವೆ ನಂಬರ್ | ವಿಸ್ತೀರ್ಣ ಎಕರೆ/ಗುಂಟೆ | ಹಣ ಪಾವತಿಯ ವಿವರ | ಮೊಬಲಗು ರೂ. ಪೈ. |
|---|---|---|---|
| (1) | (2) | (3) | (4) |
| | | (1) ಭೂ ಪರಿವರ್ತನಾ ಶುಲ್ಕ, ಎಕರೆ ಒಂದಕ್ಕೆ ರೂ. . . . . | |
| | | (2) ಪೋಡಿ ಶುಲ್ಕ ರೂ. . . . . . | |
| | | ಒಟ್ಟು | |

(ರೂ. ಅಕ್ಷರಗಳಲ್ಲಿ. . . . . . . . . . . . . . . . . . . . . . . . . . .)

ಜಿಲ್ಲಾಧಿಕಾರಿ/ಉಪವಿಭಾಗಾಧಿಕಾರಿ.

ಗೆ:

. . . . . . . . . . . . . . . . . . . .

. . . . . . . . . . . . . .

ಪ್ರತಿಯನ್ನು:

ತಹಶೀಲ್ದಾರರು.

. . . . . . . . . . . . . . . . . . . . .ತಾಲ್ಲೂಕು ರವರಿಗೆ ಮುಂದಿನ ನಡವಳಿಕೆಗಾಗಿ ರವಾನಿಸಲಾಗಿದೆ.

---

ಅನುಬಂಧ 4
(ಕರಾರು)

. . . . . . . . . . . . . . . . .ಜಿಲ್ಲೆ. . . . . . . . . . . . . . . .ತಾಲ್ಲೂಕು. . . . . . . . . . . . . . . . . . . . .ಹೋಬಳಿ
. . . . . . . . . . . . . . . . . . . . . . .ಗ್ರಾಮದ ವಾಸಿಯಾದ ಶ್ರೀಮತಿ/ಶ್ರೀ. . . . . . . . . . . . . . . . . . . . . .
. . . . . . . . . . . . . . . . . . . .ವಯಸ್ಸುಳ್ಳ ನಾನು/ನಾವು ಘೋಷಿಸುವುದೇನೆಂದರೆ.

ನಾನು/ನಾವು. . . . . . . . . . . . . . . . . . . ಜಿಲ್ಲೆ ಜಿಲ್ಲಾಧಿಕಾರಿಗಳಲ್ಲಿ. . . . . . . . . . . . . . . . .ತಾಲ್ಲೂಕು
. . . . . . . . . . . . . . . . . . . . .ಹೋಬಳಿ . . . . . . . . . . . . . . . . . . . . . . . .ಗ್ರಾಮದ . . . . . . . . . . . . . . .
ಸರ್ವೆ ನಂಬರುಗಳಲ್ಲಿನ. . . . . . . . . . ಎಕರೆ. . . . . . . . . . . . . ಗುಂಟೆ ವಿಸ್ತೀರ್ಣಕ್ಕೆ ವಾಸದ/ಕೈಗಾರಿಕಾ ಉದ್ದೇಶಕ್ಕೆ ಭೂ ಪರಿವರ್ತನೆಗೋಸ್ಕರ ಅರ್ಜಿ ಸಲ್ಲಿಸಿದ್ದು. ನಾನು/ನಾವು ಸದರಿ ಜಮೀನಿನ ಭೂ ಪರಿವರ್ತನೆಗೆ ಜಿಲ್ಲಾಧಿಕಾರಿಗಳವರಿಂದ ವಿಧಿಸಲ್ಪಡುವ ಯಾವುದೇ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತೇನೆ/ಒಳಪಟ್ಟಿರುತ್ತೇವೆ.

(1) ಭೂ ಪರಿವರ್ತಿತ ಆದೇಶವು. . . . . . . . . . . . . . . . . . . .ಪ್ರಾಧಿಕಾರ/ನಗರಪಾಲಿಕೆ/ಮಾಲಿನ್ಯ ನಿಯಂತ್ರಣಾ ಮಂಡಳಿ ಇತ್ಯಾದಿ ಇವರಿಂದ ಪೂರ್ವಾನುಮತಿ ಪಡೆಯದೆ ಉಪಯೋಗಿಸಿಕೊಳ್ಳಲು ನನಗೆ ಯಾವ ರೀತಿಯ ಹಕ್ಕು ಇರುವುದಿಲ್ಲ.

(2) ಈ ಭೂ ಪರಿವರ್ತಿತ ಜಮೀನನ್ನು . . . . . . . . . . . . . . . . . ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳಲಾಗುವುದು ಹಾಗೂ ಈ ಜಮೀನನ್ನು ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವುದಿಲ್ಲ.

(3) ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಸಂಬಂಧಪಟ್ಟ . . . . . . . . . ಪ್ರಾಧಿಕಾರ/ಗ್ರಾಮ ಪಂಚಾಯಿತಿ/ಅಧಿಸೂಚಿತ ಪ್ರದೇಶ ಸಮಿತಿಯವರಿಂದ ಅನುಮೋದಿಸಿಕೊಂಡು ಅನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುತ್ತೇನೆ/ಕಟ್ಟುತ್ತೇವೆ. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನ್‌ಗೆ ಅನುಮೋದನೆ ಪಡೆಯದೆ ಪರಭಾರೆ ಮಾಡುವುದಿಲ್ಲ.

(4) ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ಸಂಬಂಧಪಟ್ಟ . . . . . . . . . ಪ್ರಾಧಿಕಾರ:ಅಧಿಸೂಚಿತ ಪ್ರದೇಶ ಸಮಿತಿ/ಗ್ರಾಮ ಪಂಚಾಯಿತಿರವರು ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸುತ್ತೇನೆ/ಕಾಯ್ದಿರಿಸುತ್ತೇವೆ.

(5) ನಾನು/ನಾವು ಇತರೆ ವ್ಯಕ್ತಿಗಳು ಈ ಜಮೀನಿನಲ್ಲಿ ಕಟ್ಟುವ ಕಟ್ಟಡಗಳಿಗೆ ಅವಶ್ಯಕವಾದ ಪರವಾನಗಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ/ಅಧಿಸೂಚನೆ ಪ್ರದೇಶ ಸಮಿತಿ/. . . . . . . . . . . . . . . . . . ಅಭಿವೃದ್ಧಿ ಪ್ರಾಧಿಕಾರ/ಪುರಸಭೆ/ಮುನಿಸಿಪಲ್ ಕಾರ್ಪೋರೇಷನ್ ಇವರುಗಳಿಂದ ಪಡೆದು ಕಟ್ಟಡಗಳನ್ನು 2 ಪ್ರಾರಂಭಿಸುತ್ತೇನೆ/ಪ್ರಾರಂಭಿಸುತ್ತೇವೆ. ಒಂದು ವೇಳೆ ಹಾಗೆ ಪರವಾನಗಿ ಇಲ್ಲದೆ ಕಟ್ಟಡಗಳನ್ನು ಕಟ್ಟಿದಲ್ಲಿ ಅಂತಹ ಕಟ್ಟಡಗಳನ್ನು ಅನಧಿಕೃತ ಕಟ್ಟಡಗಳೆಂದು ಪರಿಗಣಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲು ನನ್ನ:ನಮ್ಮ ಅಭ್ಯಂತರವೇನೂ ಇರುವುದಿಲ್ಲ.

(6) ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನ ನಿವೇಶನದಾರರಿಗೆ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುತ್ತೇನೆ/ಒದಗಿಸಿಕೊಡುತ್ತೇವೆ.

(7) ಈ ಜಮೀನಿಗೆ ತಾಕು ಪೂಟ್ ಖಿರಾಬ್ ಜಮೀನಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 67ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸುತ್ತೇನೆ/ಕಾಯ್ದಿರಿಸುತ್ತೇವೆ.

(8) ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 7556-665 ಆರ್ ಮತ್ತು ಬ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರ ಸಂ. ಪಿ1:7(11)67, ದಿನಾಂಕ 1-1-1966ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯ ಭಾಗದಿಂದ 40 ಮೀಟರ್ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾಯ್ದಿರಿಸುತ್ತೇನೆ/ಕಾಯ್ದಿರಿಸುತ್ತೇವೆ. ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟುವುದಿಲ್ಲ.

(9) ನಾನು/ನಾವು ನಗರ ಭೂ ಪರಿಮಿತಿ ಕಾಯ್ದೆ, 1976 ವಿಧಿ 6(1)ರ ಪ್ರಕಾರ ಸಕ್ಷಮ ಪ್ರಾಧಿಕಾರದಲ್ಲಿ ಘೋಷಣೆ ಪತ್ರವನ್ನು ಸಲ್ಲಿಸಲಾಗಿದೆ/ಸಲ್ಲಿಸುತ್ತೇನೆ:ಸಲ್ಲಿಸುತ್ತೇವೆ.

(10) ಈ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ, ಅನಿಲ ಇತರ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳುತ್ತೇನೆ/ನೋಡಿಕೊಳ್ಳುತ್ತೇವೆ ಹಾಗೂ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ/ಪರಿಸರ ಇಲಾಖೆಗಳ ಅನುಮತಿ ಪಡೆಯದೆ ಕೈಗಾರಿಕಾ ಘಟಕವನ್ನು ಸ್ಥಾಪಿಸುವುದಿಲ್ಲ.

(11) ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶವನ್ನು ನನಗೆ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಬಹುದಾಗಿದೆ. ಮತ್ತು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 96ರಂತೆ ದಂಡ ಶುಲ್ಕವನ್ನು ವಿಧಿಸಿದಲ್ಲಿ ಅದನ್ನು ಕಟ್ಟಲು ಬದ್ಧನಾಗಿರುತ್ತೇನೆ/ಬದ್ಧರಾಗಿರುತ್ತೇವೆ. ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ನನ್ನ/ನಮ್ಮ ಸಮ್ಮತಿ ಇದೆ. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿಯೆಂದು ಖಾತೆದಾರರಿಂದ ವಸೂಲಿ ಮಾಡಲು ನನ್ನ/ನಮ್ಮ ಅಭ್ಯಂತರವೇನೂ ಇರುವುದಿಲ್ಲ.

ಸದರಿ ಆದೇಶದಲ್ಲಿನ ಯಾವುದೇ ಷರತ್ತುಗಳನ್ನು ನನ್ನಿಂದ/ನಮ್ಮಿಂದ/ನಮ್ಮ ಪ್ರತಿನಿಧಿಗಳಿಂದ/ಉತ್ತರಾಧಿಕಾರಿಗಳಿಂದ/ಏಜೆಂಟರ್ ರವರಿಂದ/ಸೇವಕರಿಂದಾಗಲೀ ಉಲ್ಲಂಘನೆಯಾದಲ್ಲಿ ನೀಡಿದ ಅನುಮತಿಯನ್ನು ವಾಪಸ್ ಪಡೆಯಲು ಅಲ್ಲದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 96ರ ಅಡಿಯಲ್ಲಿ ವಿಧಿಸುವ ದಂಡನೆಗೆ ಒಳಪಟ್ಟಿರುತ್ತೇನೆ/ಒಳಪಟ್ಟಿರುತ್ತೇವೆ.

ನಾನು/ನಾವು ಈ ದಿನ. . . . . . . . . . . . . . . . . . . ರಂದು ಈ ದಸ್ತಾವೇಜು (ಕರಾರು) ಅನ್ನು ಬರೆದುಕೊಟ್ಟಿರುತ್ತೇನೆ:ಬರೆದುಕೊಟ್ಟಿರುತ್ತೇವೆ.

ಷೆಡ್ಯೂಲ್ ವಿವರ

. . . . . . . . . . . . ತಾಲ್ಲೂಕು. . . . . . . . . . . . . . . . . . . ಹೋಬಳಿ. . . . . . . . . . . . ಗ್ರಾಮದ ಸರ್ವೆ ನಂ. . . . . . . . . . . . . . . . . ರಲ್ಲಿನ. . . . . . . . . . ಎಕರೆ/ಗುಂಟೆ ಭೂ ಪರಿವರ್ತಿತ ಜಮೀನಿಗೆ ಚೆಕ್ಕುಬಂದಿ.

ಪೂರ್ವಕ್ಕೆ :





ಪಶ್ಚಿಮಕ್ಕೆ :

ಉತ್ತರಕ್ಕೆ :

ದಕ್ಷಿಣಕ್ಕೆ :

ಸಾಕ್ಷಿದಾರರು:

(ಅರ್ಜಿದಾರರ ಸಹಿ)

(1)

ಹೆಸರು ಮತ್ತು ವಿಳಾಸ

(2)

ಹೆಸರು ಮತ್ತು ವಿಳಾಸ

ಸಂಖ್ಯೆ: ಜಿಲ್ಲಾಧಿಕಾರಿಗಳ/ಉಪವಿಭಾಗಾಧಿಕಾರಿಗಳ ಕಾರ್ಯಾಲಯ

. . . . . . . . . . ಜಿಲ್ಲೆ

ದಿನಾಂಕ. . . 1999

ಅನುಬಂಧ 5

ಅಧಿಕೃತ ಜ್ಞಾಪನ

ವಿಷಯ: . . . . . . . ಜಿಲ್ಲೆ . . . . . . . ತಾಲ್ಲೂಕು. . . . . . . . ಹೋಬಳಿ
. . . . . . . . . . . . . . ಗ್ರಾಮದ ಸರ್ವೆ ನಂಬರ್. . . . . . . . . ರಲ್ಲಿ
ಒಟ್ಟು . . . . . . . . ಎಕರೆ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು
ವ್ಯವಸಾಯೇತರ. . . . . . . . . . ಉದ್ದೇಶಕ್ಕಾಗಿ ಭೂ ಪರಿವರ್ತನ ಕೋರಿ
ಶ್ರೀ. . . . . . . . . . . . . . . . . . (ಪೂರ್ಣ ವಿಳಾಸ)
ರವರು ಸಲ್ಲಿಸಿರುವ ಅರ್ಜಿ ದಿನಾಂಕ: . . . . . . . . . . . . . . . .

ಉಲ್ಲೇಖ: (1) ತಹಶೀಲ್ದಾರ್. . . . . . . . . . . . . . . . ರವರ ವರದಿ
ಸಂಖ್ಯೆ: . . . . . . . . . . . . . . . . . . . . . . .
ದಿನಾಂಕ: . . . . . . . . . . . . . . . . . . . . . .
(2) ಭೂ ಪರಿವರ್ತನಾ ಶುಲ್ಕ ರೂ. . . . . . . . . . . ಹಾಗೂ ಪೋಡಿ
ಶುಲ್ಕ ರೂ. . . . . . . . . ಒಟ್ಟು ರೂ . . . . . . . . . ಗಳನ್ನು
ಡಿ.ಡಿ. ಚಲನ್ ನಂಬರ್: . . . . . . . . . . . . . . . . .
ದಿನಾಂಕ. . . . . . . . . ರಂದು ಖಜಾನೆಗೆ ಅರ್ಜಿದಾರರು ಜಮಾ
ಮಾಡಿರುತ್ತಾರೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 95(2), 95(4) ಮತ್ತು 95(7)ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು, 1994ರ ನಿಯಮ 107(1)ರಂತೆ ಎಕರೆ ಒಂದಕ್ಕೆ ರೂ. . . . . . . . . . . . . . . . . . . (ರೂಪಾಯಿಗಳು . . . . . . . . . . . . :
. . . . . . . . . . . . . . . . . . ಮಾತ್ರ)ಗಳಂತೆ ಅರ್ಜಿದಾರರು ಉಲ್ಲೇಖ (2)ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ ಶ್ರೀ. . . . . . . . . . . . . . . . . . . . . . . . . . . . . . . . . . . . .
ರವರ ಅರ್ಜಿಯನ್ನು ಪರಿಗಣಿಸಿ ಹೋಬಳಿ. . . . . . . . . . . . . . . . . . . . . ಗ್ರಾಮದ ಸರ್ವೆ ನಂಬರ್. . . . . . . . .
. . . ರಲ್ಲಿನ ಒಟ್ಟು. . . . . . . . . . . . . . ಎಕರೆ:ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ. . . . . . .
ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

(1) ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ/ಅಭಿವೃದ್ಧಿ ಮಂಡಳಿ/ಸಿಎಂಸಿ/ಟಿಎಂಸಿ/ಮಾಲಿನ್ಯ ನಿಯಂತ್ರಣಾ ಮಂಡಳಿ/ಗ್ರಾಮ ಪಂಚಾಯಿತಿಗಳಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

(2) ಈ ಭೂ ಪರಿವರ್ತಿತ ಜಮೀನನ್ನು . . . . . . . . . . . . . ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

(2) ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು . . . . . . . . . . . . . . . . . . . . . . . . . . . . . . . . . . . . . . . . . (ಪ್ರಾಧಿಕಾರ/ನಗರಪಾಲಿಕೆ/ಇತ್ಯಾದಿ) ರವರಿಂದ ಅನುಮೋದಿಸಿಕೊಂಡು. ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

(4) ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು . . . . . . . . . . . . . . . . . . . . . (ಪ್ರಾಧಿಕಾರ/ನಗರಪಾಲಿಕೆ/ಇತ್ಯಾದಿ)ರವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟ ಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

(5) ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿನ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

(6) ಈ ಜಮೀನಿಗೆ ತಾಕು ಪೂಟ್ ಖರಾಬ್ ಜಮೀನಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 67ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಹಾಗೂ ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸರ್ವೆ ನಂ. . . . . . . . . . ರಲ್ಲಿನ "ಎ" ಖರಾಬ್ ವಿಸ್ತೀರ್ಣ . . . . . . . . . . . . ಕ್ಕೆ ಮಾರುಕಟ್ಟೆ ದರ ಮತ್ತು ಭೂ ಪರಿವರ್ತನೆ ಶುಲ್ಕ ರೂ. . . . . . . . . . . . . ಪಾವತಿಸಿಕೊಳ್ಳಲಾಗಿದ್ದು . . . . . . . . . . . ಉದ್ದೇಶಕ್ಕಾಗಿ ಬಳಸಲು ಭೂ ಪರಿವರ್ತನೆ ನೀಡಿದೆ. ಹಾಗೂ . . . . . . . . ವಿಸ್ತೀರ್ಣ "ಬಿ" ಖರಾಬಿನಲ್ಲಿ ಬರುವ ಕಾರಣ. ಇದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ "ಬಿ" ಖರಾಬಿನ ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರ್ ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

(7) ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 7556-665 ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ. ಪಿ1:7(11)67, ದಿನಾಂಕ 1-1-1966ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರನನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

(8) ಅರ್ಜಿದಾರರು ನಗರ ಭೂ ಪರಿಮಿತಿ ಕಾಯಿದೆ, 1976 ವಿಧಿ 6(1)ರ ಪ್ರಕಾರ ಸಕ್ಷಮ ಪ್ರಾಧಿಕಾರದಲ್ಲಿ ಘೋಷಣೆ ಪತ್ರವನ್ನು ಸಲ್ಲಿಸದಿದ್ದಲ್ಲಿ ಈಗ ತಕ್ಷಣ ಅಂತಹ ಘೋಷಣೆ ಪತ್ರವನ್ನು ಸಲ್ಲಿಸತಕ್ಕದ್ದು ಮತ್ತು ಈ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಭೂ ಪರಿಮಿತಿ ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ.

(9) ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ ಅನಿಲ ಇತರ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ/ಪರಿಸರ ಇಲಾಖೆಗಳ ಅನುಮತಿ ಹೊಂದಿರತಕ್ಕದ್ದು.

(10) ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ, 1964ರ ಕಲಂ 96ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು: ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

ಷೆಡ್ಯೂಲ್ ವಿವರ

. . . . . . . . . . . . . . . . . . . ಜಿಲ್ಲೆ . . . . . . . . . ತಾಲ್ಲೂಕು . . . . . . . . . . . . . . . . . . . . ಹೋಬಳಿ . . . . . . . . . . . . . ಗ್ರಾಮದ ಸರ್ವೆ ನಂ. . . . . . . . . . ರಲ್ಲಿನ ಒಟ್ಟು . . . . . . . . . . . . . . ಎಕರೆ ಗುಂಟೆ ವಿಸ್ತೀರ್ಣಕ್ಕೆ ಭೂ ಪರಿವರ್ತಿತ ಜಮೀನಿಗೆ ಚಕ್ಕುಬಂದಿ:

ಪೂರ್ವಕ್ಕೆ :





ಪಶ್ಚಿಮಕ್ಕೆ :

ಉತ್ತರಕ್ಕೆ :

ದಕ್ಷಿಣಕ್ಕೆ :

ಜಿಲ್ಲಾಧಿಕಾರಿಗಳು/ಉಪ ವಿಭಾಗಾಧಿಕಾರಿಗಳು

. . . . . . . . . . ಜಿಲ್ಲೆ.

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳಕಂಡವರಿಗೆ ಕಳುಹಿಸಿದೆ:—

(1) ತಹಶೀಲ್ದಾರ್ . . . . . . . . . . ರವರಿಗೆ ಮೂಲ ಕಡತ ಹಾಗೂ ಚಲನ್‌ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ.ಯಲ್ಲಿ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೇದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.

(2) . . . . . . . . . . . . . . . . . . . . (ಪ್ರಾಧಿಕಾರ/ನಗರಪಾಲಿಕೆ) ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

(3) ಉಪ ವಿಭಾಗಾಧಿಕಾರಿಗಳು . . . . . . . . . . . . . . . . . . . ಉಪ ವಿಭಾಗ.

(4) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಭೂ ಪರಿಮಿತಿ ಕಚೇರಿ (ಅಪರ), ಬೆಂಗಳೂರು.

(5) ಉಪ ನಿರ್ದೇಶಕರು ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ . . . . . . . . . . . . ಉಪ ವಿಭಾಗ.

(6) ಅರ್ಜಿದಾರರಾದ . . . . . . . . . . . . . . . . . . . . . . . . . . . . . . ರವರಿಗೆ ದೃಢೀಕೃತ ಅಂಚೆ ಮೂಲಕ.

(7) ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳು

. . . . . . ಜಿಲ್ಲೆ